**ಚಾಸಾ-6 ಪ್ರಾಸಾ-6**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**

**ಸಿಸಿ.7766/2014**

| | |
|---|---|
| **ಸಾಕ್ಷಿದಾರರ ಹೆಸರು** | ದೇವರಾಜು.ಬಿ.ಪಿ. |
| **ತಂದೆಯ ಹೆಸರು** | ಪುಟ್ಟದೇವಣ್ಣ, |
| **ವಯಸ್ಸು** | 47 ವರ್ಷ |
| **ಉದ್ಯೋಗ** | ಆಟೋ ಮೊಬೈಲ್ ಷೋ ರೂಮ್, |
| **ವಾಸ** | ಬಾಗಲಗುಂಟೆ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 11.02.2026. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತು. ಒಂದನೇ ಆರೋಪಿಯು ಮ್ಯಾಕ್ಸ್ ಮೋಟಾರ್ಸ್ ಕಂಪನಿಯಲ್ಲಿ ಕ್ಯಾಶಿಯರ್ ಆಗಿದ್ದರು. ಎರಡನೇ ಆರೋಪಿಯು ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದರು. ಅದೇ ರೀತಿ ಚಾಸಾ-1 ರವರು ನನಗೆ ಗೊತ್ತು. ಅವರು ಮ್ಯಾಕ್ಸ್ ಮೋಟಾರ್ಸ್ ಕಂಪನಿಯ ಮಾಲೀಕರಾಗಿದ್ದರು. ನಾನು ಸದರಿ ಕಂಪನಿಯಲ್ಲಿ ಸುಮಾರು 18 ವರ್ಷಗಳ ಕಾಲ ಸ್ಪೇರ್ ಪಾರ್ಟ್ಸ್ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಚಾಸಾ-1 ರವರು ಒಂದನೇ ಆರೋಪಿಯನ್ನು ಅಕೌಂಟ್ಸ್ ತಾಳೆಯಾಗುತ್ತಿಲ್ಲ ಎಂದು ಎರಡು ಮೂರು ಬಾರಿ ಕೇಳಿರುತ್ತಾರೆ. ಆದರೆ ಒಂದನೇ ಆರೋಪಿಯು ಚಾಸಾ-1 ರವರಿಗೆ ಸರಿಯಾದ ಮಾಹಿತಿ ನೀಡಿರುವುದಿಲ್ಲ.

2. ದಿ.07.09.2011 ರಂದು ಚಾಸಾ-1 ರವರು ನನ್ನನ್ನು ಹಾಗೂ ಉಳಿದ ಮೂರು ಜನರನ್ನು ಕರೆದು ನಾನು ಒಂದನೇ ಆರೋಪಿಯನ್ನು ಲೆಕ್ಕ ಕೇಳುತ್ತಿದೇನೆ, ಆದರೆ ಅವರು ಲೆಕ್ಕವನ್ನು ಕೊಡುತ್ತಿಲ್ಲ ಎಂದು ಹೇಳಿರುತ್ತಾರೆ. ಆ ಸಂದರ್ಭದಲ್ಲಿ ಒಂದನೇ ಆರೋಪಿಯು ಮಾತನಾಡದೇ ಆಚೆ ಹೋಗಿರುತ್ತಾರೆ. ಚಾಸಾ-1 ರವರು ರೂ.1,61,00,000/- ನಮ್ಮ ಮ್ಯಾಕ್ಸ್ ಮೋಟಾರ್ಸ ಕಂಪನಿಗೆ ನಷ್ಟವಾಗಿರುತ್ತದೆ ಎಂದು ನಮಗೆ ತಿಳಿಸಿರುತ್ತಾರೆ. ಈ ಬಗ್ಗೆ ಪೊಲೀಸರು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಚಾಸಾ-1 ರವರ ಕಂಪನಿಯನ್ನು ನಾನು 2020ರಲ್ಲಿ ಬಿಟ್ಟಿರುತ್ತೇನೆ.

**ಪಾಟೀ ಸವಾಲು : ಶ್ರೀ.ಎಸ್ ಆರ್ ಎನ್ ಒಂದನೇ ಆರೋಪಿ ಪರ ವಕೀಲರಿಂದಃ**

ನನ್ನನ್ನು ಮ್ಯಾಕ್ಸ್ ಮೋಟಾರ್ಸ ಕಂಪನಿಯಲ್ಲಿ ಸ್ಪೇರ್ ಪಾರ್ಟ್ಸ್ ಮ್ಯಾನೇಜರ್ ಆಗಿ ನೇಮಕಾತಿ ಮಾಡಿಕೊಂಡಿದ್ದ ಬಗ್ಗೆ ನಾನು ತನಿಖಾಧಿಕಾರಿಗೆ ಯಾವುದೇ ದಾಖಲೆ ಕೊಟ್ಟಿಲ್ಲ. ಅದೇ ರೀತಿ

**ಚಾಸಾ-6 ಪ್ರಾಸಾ-6**

ಚಾಸಾ-1 ರವರು ನನಗೆ ಯಾವುದೇ ನೇಮಕಾತಿ ಪತ್ರ ಅಥವಾ ಗುರುತಿನ ಚೀಟಿಯನ್ನಾಗಲೀ ನೀಡಿರುವುದಿಲ್ಲ. ಚಾಸಾ-1 ರವರು ನನಗೆ ಸುಮಾರು 15 ವರ್ಷಗಳಿಂದಲೂ ಪರಿಚಯವಿರುತ್ತಾರೆ. ನನಗೆ ಚಾಸಾ-1 ರವರು 15 ವರ್ಷಗಳಿಂದ ಪರಿಚಯವಿದುದ್ದರಿಂದ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಹೊರತು ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ ಎಂದರೆ ಸರಿಯಲ್ಲ. ದಿ.07.09.2011 ರಂದು ಚಾಸಾ-1 ರವರು ನನಗೆ ಬರವಣಿಗೆಯಲ್ಲಿ ಪತ್ರ ನೀಡಿರುವುದಿಲ್ಲ ಆದರೆ ಫೋನ್ ಮೂಲಕ ಕರೆದು ಒಂದನೇ ಆರೋಪಿಯ ಅಕೌಂಟ್ಸ್ ಸಂಬಂಧ ಚರ್ಚಿಸಲು ನನ್ನನ್ನು ಹಾಗೂ ಇತರೆ ಮೂರು ಜನರನ್ನು ಕರೆದಿರುತ್ತಾರೆ. ದಿ.07.09.2011 ರಂದು ನಾನು ಸಹ ಒಂದನೇ ಆರೋಪಿಯನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿಹಾಜರಿದ್ದ ಬಗ್ಗೆ ಯಾವುದೇ ಸಹಿಯನ್ನು ಚಾಸಾ-1 ರವರು ಪಡೆದಿರುವುದಿಲ್ಲ. ಒಂದನೇ ಆರೋಪಿಯು ಆರು ತಿಂಗಳಿನಿಂದಲೂ ಲೆಕ್ಕವನ್ನು ಕೊಡುತ್ತಿಲ್ಲ ಎಂದು ನಮ್ಮನ್ನು ಕರೆದು ವಿಚಾರಣೆ ಮಾಡಿರುತ್ತಾರೆ. ಆದರೆ ಯಾವ ಆರ್ಥಿಕ ವರ್ಷದ ಅಕೌಂಟ್ ಬಗ್ಗೆ ಎಂದು ನನಗೆ ಗೊತ್ತಿಲ್ಲ.

3. ನಾನು ಒಂದು ಮತ್ತು ಎರಡನೇ ಆರೋಪಿತರನ್ನು ಯಾವಾತ್ತು ನೋಡಿರುವುದಿಲ್ಲ ಮತ್ತು ಅವರನ್ನು ನ್ಯಾಯಾಲಯದಲ್ಲಿ ಈ ದಿನ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತನ್ನು ಕೇಳಿಕೊಂಡು ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲದೇ ಇದ್ದರೂ ಸಹ ಚಾಸಾ-1 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮ್ಯಾಕ್ಸ್ ಮೋಟಾರ್ಸ್ ಕಂಪನಿಯು ಸಹಭಾಗಿತ್ವದಲ್ಲಿತ್ತು ಎಂದರೆ ಸರಿಯಲ್ಲ.

**ಶ್ರೀ.ಎನ್.ಎನ್. ಎರಡನೇ ಆರೋಪಿ ಪರ ವಕೀಲರು ಒಂದನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ತಿಳಿಸಿರುತ್ತಾರೆ. ಆದ್ದರಿಂದ, ಸದರಿ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.**

**<u>ಮರು ವಿಚಾರಣೆ: ಇಲ್ಲ.</u>**

<u>(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)</u>

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**

**ಬೆಂಗಳೂರು.**